

# ಜಿಂದಾ ಟೈಗರ್

'ಟೈಗರ್ ಜಿಂದಾ ಹೈ' ವರ್ಷದ ಕೊನೆಗೆ ಬಾಲಿವುಡ್ ಉದ್ಯಮಕ್ಕೆ ಜೀವ ತುಂಬಿದೆ. ಜತೆಗೆ ಸಲ್ಮಾನ್ ಖಾನ್ ಚಿತ್ರಗಳ ಗಳಿಕೆಯಲ್ಲಿ ಹೊಸ ದಾಖಲೆ ನಿರ್ಮಿಸಿದೆ. ಮೊದಲ ಮೂರು ದಿನಗಳಲ್ಲಿ 114 ಕೋಟಿ ರೂಪಾಯಿ ಗಳಿಸಿದ್ದು, ಇದು ಈವರೆಗಿನ ಸಲ್ಮಾನ್ ಚಿತ್ರಗಳಲ್ಲೇ ಹೊಸ ದಾಖಲೆ ಎನ್ನಲಾಗಿದೆ. ಮೊದಲ ಐದು ದಿನಗಳಲ್ಲಿ ಈ ಚಿತ್ರ ಸ್ವದೇಶದಲ್ಲಿ 173 ಕೋಟಿ ರೂಪಾಯಿ ಗಳಿಸಿದ್ದು, ವಿದೇಶದ ಗಳಿಕೆಯೂ ಸೇರಿ 225 ಕೋಟಿ ರೂಪಾಯಿ ದಾಟಿದೆ.

ವರ್ಷದ ಆರಂಭದಲ್ಲಿ ಸಲ್ಮಾನ್‌ನ 'ಟ್ಯೂಬ್‌ಲೈಟ್' ಚಿತ್ರ ಬಿಡುಗಡೆಯಾದದ್ದು ಒಟ್ಟು 119 ಕೋಟಿ ರೂಪಾಯಿ ಕಲೆಕ್ಷನ್ ಆಗಿದ್ದರೂ ನಿರ್ಮಾಪಕರಿಗೆ ನಷ್ಟವಾಗಿತ್ತು. ಹಾಗೆಯೇ ಶಾರೂಕ್ ಖಾನ್‌ನ 'ಜಬ್ ಹ್ಯಾರಿ ಮೆಟ್ ಸೆಜಲ್' ಚಿತ್ರವೂ ನಷ್ಟ ಅನುಭವಿಸಿತ್ತು. ಆದರೆ ಈ ಇಬ್ಬರೂ ಹೀರೋಗಳು ಆಯಾ ಚಿತ್ರಗಳ ಸಹನಿರ್ಮಾಪಕರಾದ್ದರಿಂದ ನಷ್ಟವನ್ನು ತಾವೇ ತುಂಬಿಸಿಕೊಂಡಿದ್ದರು. ಮೆಗಾಸ್ಟಾರ್‌ಗಳ ಕಲೆಕ್ಷನ್ ಮೇಲೆಯೇ ಬಾಲಿವುಡ್ ಉದ್ಯಮ ನಿಂತಿದ್ದು ಉದ್ಯಮದಲ್ಲಿ ಇದು ಆತಂಕ ಸೃಷ್ಟಿಸಿತ್ತು. ಆದರೆ ಈಗ ವರ್ಷದ ಕೊನೆಗೆ ಸಲ್ಮಾನ್ ಹಳೆಯ ಕೊರತೆಗಳನ್ನೆಲ್ಲ ಟೈಗರ್ ಜಿಂದಾ ಹೈ ಮೂಲಕ ತುಂಬಿಸಿಕೊಂಡುವಂತೆ ಕಾಣುತ್ತಿದೆ. ಈ ಚಿತ್ರ 2018ರಲ್ಲೂ ಭರ್ಜರಿ ಕಲೆಕ್ಷನ್ ಮುಂದುವರಿಸುವ ನಿರೀಕ್ಷೆ ಇದೆ.

2017ರಲ್ಲಿ 'ಬಾಹುಬಲಿ–2' ಅತ್ಯಧಿಕ ಕಲೆಕ್ಷನ್ ಕಂಡ ಚಿತ್ರ. ಆದರೆ ಅದು ತೆಲುಗು ಮೂಲವಾದ್ದರಿಂದ ಬಾಲಿವುಡ್ ಸಲ್ಮಾನ್, ಶಾರೂಕ್, ಅಮೀರ್ ಖಾನ್‌ತ್ರಯರ ಮೇಲೆಯೇ ಹೆಚ್ಚು ನಿರೀಕ್ಷೆ ಇಟ್ಟುಕೊಂಡಿತ್ತು. ಈ ವರ್ಷ 'ಗೋಲ್‌ಮಾಲ್ ಅಗೈನ್' ಚಿತ್ರ ಅತ್ಯಧಿಕ 205 ಕೋಟಿ ರೂಪಾಯಿ ಕಲೆಕ್ಷನ್ ಮಾಡಿ ಮೊದಲ ಸ್ಥಾನದಲ್ಲಿತ್ತು. ಈಗ ಸಲ್ಮಾನ್ ಆ ದಾಖಲೆಯನ್ನೂ ಮುರಿಯಲಿದ್ದಾನೆ.

## ರಾಣಿ ಪುನರಾಗಮನ

ರಾಣಿ ಮುಖರ್ಜಿ ಮದುವೆಯ ಬಳಿಕ ನಟನೆಯಿಂದ ಕಣ್ಮರೆಯಾಗಿದ್ದಾಕೆ ಈಗ ಮರಳಿ ಬಂದಿದ್ದಾಳೆ. ಹೊಸ ಚಿತ್ರದಲ್ಲಿ ವಿಭಿನ್ನ ಪಾತ್ರವೊಂದರಲ್ಲಿ ನಟಿಸಿದ್ದಾಳೆ. ಮಾತನಾಡುವಾಗ ಉಗ್ಗು ಇರುವ ಪಾತ್ರವೊಂದರಲ್ಲಿ ನಾಯಕಿ ಈಕೆ. 'ಹಿಕ್ಕಿ' ಎನ್ನುವ ಈ ಚಿತ್ರದಲ್ಲಿ ಅತ್ಯುತ್ತಮ ನಟನೆ ನೀಡಿದ್ದಾಳೆ ಎನ್ನುವ ಸುದ್ದಿ ಹಬ್ಬಿದೆ. ಉಗ್ಗು ಇದ್ದರೂ ಅದನ್ನು ಸವಾಲಾಗಿ ಎದುರಿಸಿ ಜೀವನದಲ್ಲಿ ಮುಂದೆ ಬರುವ ಪಾತ್ರವಿದು.

ಮದುವೆಯ ಬಳಿಕ ಶ್ರೀದೇವಿ ಕೂಡಾ ಹೀಗೆಯೇ 'ಇಂಗ್ಲಿಷ್ ವಿಂಗ್ಲಿಷ್' ಚಿತ್ರದ ನಟನೆಯ ಮೂಲಕ ಪ್ರೇಕ್ಷಕರ ಹೃದಯ ಗೆದ್ದಿದ್ದಳು. ಜತೆಗೆ ಪ್ರಶಸ್ತಿಯನ್ನೂ. ಈಗ ರಾಣಿ ಅದೇ ದಾರಿಯಲ್ಲಿ ನಡೆಯುವಂತಿದೆ.

